# ಒನಕೆಯ ನೆನಕೆಯಲ್ಲಿ

**ಕೈಯಲ್ಲಿ ಆಯುಧವಾಗಿ ಒನಕೆ ಹಿಡಿದು ನೂರಾರು ಶತ್ರುಗಳನ್ನು ಕೊಂದು ಚಿತ್ರದುರ್ಗದ ಕೋಟೆ ಕಾಪಾಡಿದ 'ಒನಕೆ ಓಬವ್ವ'ಳ ಸಾಹಸಗಾಥೆ ಕನ್ನಡ ನಾಡಿನ ಅಭಿಮಾನದ ಕಥೆಗಳಲ್ಲಿ ಜನಜನಿತ. ಅಂದಹಾಗೆ, ಓಬವ್ವನ ಕೈಗೆ ಬಲ ಕೊಟ್ಟ ಒನಕೆಯನ್ನು ಯಾವ್ಯಾವ ಮರದಿಂದ ಮಾಡಲಾಗುತ್ತದೆ? ಇಲ್ಲಿದೆ ಒನಕೆ ಹಿಂದಿನ 'ಮರಗಳ ಕಥೆ'.**

**■ ವಿನು ಗಂಗೆ**

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಹೊಸ ಕಟ್ಟಡ ಉದ್ಘಾಟನೆ ಸಮಯ. ಅಲ್ಲೀವರೆಗೂ ಜೀವನ್‌ಭಿಮಾ ನಗರದ ಕ್ವಾರ್ಟರ್ಸ್ ಅನ್ನೇ ಶಾಲೆಯಾಗಿಸಿದ್ದು ಈಗ ನಮ್ಮದೇ ಕಟ್ಟಡಕ್ಕೆ ಹೋಗುವ ಸಂಭ್ರಮ. ವಿದ್ಯಾರ್ಥಿಗಳಾದ ನಾವು ಹಾಗೂ ಉಪನ್ಯಾಸಕ ವೃಂದ ನಮ್ಮ ಮನೆಯದ್ದೇ ಗೃಹಪ್ರವೇಶ ಎನ್ನುವುದಕ್ಕಿಂತ ಹೆಚ್ಚಾಗಿ ಸಿದ್ಧತೆ ನಡೆಸಿದ್ದೆವು. ಸಮೂಹ ನೃತ್ಯದ ತಾಲೀಮಿನಲ್ಲಿ ಭಾಗವಹಿಸಲು ನನ್ನನ್ನೂ ಕರೆದರು, ಹೋದೆ.

ಪಿ.ಬಿ. ಶ್ರೀನಿವಾಸ್ ಅವರ ಸಿರಿಕಂಠದಲ್ಲಿ 'ನಾಗರಹಾವು' ಸಿನಿಮಾದ, ಚಿ. ಉದಯ್ ಶಂಕರ್ ರಚನೆಯ 'ಕನ್ನಡ ನಾಡಿನ ವೀರ ರಮಣಿಯ' ಹಾಡು. ನಾನು ತೆಳ್ಳಗಿದ್ದರಿಂದ ಬಳುಕಬಹುದೆಂಬ ನಿರೀಕ್ಷೆಯಲ್ಲಿದ್ದ ನಮ್ಮ ಟೀಚರ್‌ಗೆ ಎಷ್ಟು ಸಲ ಹೇಳಿಕೊಟ್ಟರೂ ಲಾಲಿತ್ಯ ತೋರದ ನನ್ನ ಹೆಜ್ಜೆಗಳು ಬಹುಶಃ ನಿರಾಸೆ ಮೂಡಿಸಿರಬೇಕು. ಸೊಂಟ ಬಳುಕಿಸುವತ್ತ ಗಮನಿಸಿದರೆ ಕೈಗಳ ಭಂಗಿ ತಪ್ಪಿ, ಕೈಗಳ ಭಂಗಿ ಗಮನಿಸಿದರೆ ಸೊಂಟ ಬಳುಕುವುದು ತಪ್ಪಿ, ತಾಳ ಲಯವಿಲ್ಲದ ನನ್ನ ಕುಣಿತ ತಿದ್ದಲಾಗದು ಎನಿಸಿ 'ನೀನು ಕುಣಿಯುವುದು ಬೇಡ ಹೊರಕ್ಕೆ ಬಾ' ಎಂದರು.

ತಲೆಗೆ ವಿದ್ಯೆ ಅಂಟುವಷ್ಟು ಸುಲಭವಾಗಿ ಕೈ ಕಾಲಿಗೆ ನೃತ್ಯ ಅಂಟದು ಎನಿಸಿ ಸಾಲಿನಿಂದ ಹೊರ ಬಂದು ತರಗತಿಯ ಕಡೆಗೆ ಕಾಲೆಳೆಯುತ್ತಾ ನಡೆದೆ. ಪಲ್ಲವಿ ಕಲಿಸುವುದು ಮುಗಿದು ರೆಕಾರ್ಡರ್‌ನಲ್ಲಿ ಚರಣ ಮೊಳಗಿತು. ಚಿತ್ರದುರ್ಗದ ಕಲ್ಲಿನ ಕೋಟೆ, ಸಿಡಿಲಿಗು ಬೆಚ್ಚದ ಉಕ್ಕಿನ ಕೋಟೆ...! ಹೆಜ್ಜೆಗಳು ತಟ್ಟನೆ ನಿಂತವು. ಚಿತ್ರದುರ್ಗದಿಂದಲೇ ಬಂದವಳಾದ್ದರಿಂದ ನೆಲದ ಹಿರಿಮೆಯ ಸೆಳೆತ ಪುನಃ ನನ್ನನ್ನು ತಾಲೀಮು ನಡೆಯುವಲ್ಲಿ ಕರೆತಂತು. ಸ್ವಲ್ಪ ದೂರದಲ್ಲೇ ನೋಡುತ್ತಾ ನಿಂತೆ.

ಕಳ್ಳಗಿಂಡಿಯ ಹಿಂದೆ ಪಿಸುಮಾತು ಕೇಳಿದಳು, ಆಲಿಸಿದಳು, ಇಣುಕಿದಳು, ವೈರಿಪಡೆ ಕೋಟೆಯತ್ತ ಬರುವುದನ್ನು ಕಂಡಳು... ಎಂದು ವಿಮಲಾ ಎಂಬ ನನ್ನ ಸಹಪಾಠಿಗೆ ಓಬವ್ವನ ಪಾತ್ರ ಹೇಳಿಕೊಡುತ್ತಿದ್ದರು. ದೃಶ್ಯ ಚೆನ್ನಾಗಿ ಬರಲೆಂದು ನಮ್ಮ ಟೀಚರ್ ತಮ್ಮ ಮನೆಯಿಂದ ಒನಕೆಯನ್ನೂ ತಂದಿದ್ದರು. ಆಳ್ತನದಲ್ಲಿ ಬಲವಾಗಿದ್ದ ವಿಮಲಾ ಭಾರದ ಒನಕೆಯನ್ನು ಸುಲಭವಾಗಿ ಎತ್ತಿ ಓಬವ್ವನಂತೆ ಬೀಸಬಹುದು ಎಂದೆಣಿಸಿರಬಹುದು. ವಿಮಲಾ ಸಹಜವಾಗಿ ಹಸನ್ಮುಖಿ. ತೊಂದರೆಯಾಗಿದ್ದು ಇಲ್ಲೇ. ಕೈಗೆ ಸಿಕ್ಕಿದ ಒನಕೆ ಹಿಡಿದಳು, ವೀರಗಚ್ಚೆಯ ಹಾಕಿ ನಿಂತಳು, ದುರ್ಗಿಯನ್ನು ಮನದಲ್ಲಿ ನೆನೆದಳು, ಕಾಳಿಯಂತೆ ಬಲಿಗಾಗಿ ಕಾದಳು... ಎಂದು ಒನಕೆ ಕೈಯಲ್ಲಿ ಹಿಡಿದಾಗಲೂ ಅವಳ ಹಸನ್ಮುಖ ಹಾಗೇ ಇತ್ತು.

ಎಷ್ಟು ಸಲ ಹೇಳಿಕೊಟ್ಟರೂ ಬದಲಾಗದ ಮಂದಸ್ಮಿತ ನೋಡಿ, ನನಗೆ ನೃತ್ಯದ ಲಯ ಹೇಳಿಕೊಡುವುದೂ, ವಿಮಲಾಳ ಮುಖಭಾವ ಬದಲಿಸುವುದೂ ಒಂದೇ ಎಂದು ಟೀಚರ್‌ಗೆ ಅನಿಸಿರಬಹುದು. ಅಷ್ಟು ಹೊತ್ತಿಗಾಗಲೇ ನೋಡುತ್ತಾ ನಿಂತಿದ್ದ ನನಗೆ ಓಬವ್ವನ ಪಾತ್ರ ಆವರಿಸಿಕೊಂಡಿತ್ತು. ಶತ್ರುಗಳು ನುಸುಳುವಾಗ ಹಸನ್ಮುಖಿಯಾಗಿರಲು ಸಾಧ್ಯವೇ? ಟೀಚರ್ ಬಳಿ ಹೋಗಿ 'ನಾನು ಮಾಡಲೇ ಟೀಚರ್?' ಎಂದು ಕೇಳಿದೆ. ಅವರು 'ಹೂಂ' ಎಂದರು.

ಕೈಯಲ್ಲಿ ಒನಕೆ ಹಿಡಿದಾಗ ನನ್ನೊಳಗೆ ಓಬವ್ವನೇ ಪ್ರವಹಿಸಿದಂತಾಗಿತ್ತು. ತೆವಳುತ



ಬಗನಿ ಮರ